# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 523/2020 ಸಿಡಬ್ಲೂ: 1 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 25-11-2024

ಹೆಸರು : ವಿದ್ಯಶ್ರೀ

ತಂದೆ ಹೆಸರು : ನಾಡಗೌಡ

ವಯಸ್ಸು : 32 ವರ್ಷ

ಉದ್ಯೋಗ : ಸ್ಟೇಟ್ ಇಂಟೆಲಿಜೆನ್ಸ್ ಬೆಂಗಳೂರು

ವಾಸಸ್ಥಳ : ಬೆಂಗಳೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ದಿ. 29-10-2018 ರಿಂದ 19-09-2020 ರ ವರೆಗೂ ಕುರುಕುಂಟಾ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 03-04-2020 ರಂದು ಬೆಳಿಗ್ಗೆ 07-00 ಗಂಟೆಗೆ ನಾನು ಮತ್ತು ನಮ್ಮ ಸಿಬ್ಬಂದಿಯಾದ ಚಾ ಸಾ 5 ಮತ್ತು 6 ಗಸ್ತು ಕರ್ತವ್ಯದಲ್ಲಿದ್ದಾಗ ಸುಮಾರು 07-30 ಗಂಟೆಗೆ ಭೀಮಪ್ಪ ತಂದೆ ಬಸಪ್ಪ ಸಂದಿಮನಿ ಕರೆ ಮಾಡಿ ಯಡ್ಡಳ್ಳಿಗ್ರಾಮದ ರಾಮಲಿಂಗ ಗುಡಿ ಪಕ್ಕದ ಖುಲ್ಲಾ ಜಾಗದಲ್ಲಿ ಆರೋಪಿತನು ಅಕ್ರಮವಾಗಿ ಸೇಂದಿ ಮಾರಾಟ ಮಾರುತ್ತಿದ್ದ ಎಂಬ ಬಗ್ಗೆ ಮಾಹಿತಿ ಬಂದ ಮೇರೆಗೆ ನಾವು 07-45 ಗಂಟೆಗೆ ಯಡ್ಡಳ್ಳಿಕ್ರಾಸ್ ಹತ್ತಿರ ಹೋಗಿ ಚಾ ಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಸದರಿಯವರಿಗೆ ನಮಗೆ ಬಂದ ಮಾಹಿತಿಯ ಬಗ್ಗೆ ತಿಳಿಸಿರುತ್ತೇನೆ. ಸದರಿಯವರು ಪಂಚರಾಗಲು ಒಪ್ಪಿ ಕೊಂಡಿರುವುದರಿಂದ 08-0 ಗಂಟೆ ಸುಮಾರಿಗೆ ಯಡ್ಡಳ್ಳಿ ಕ್ರಾಸ್ ನಿಂದ ನಮ್ಮ ಸರ್ಕಾರಿ ಜೀಪು ನಂ. ಕೆ ಎ 32 ಜಿ 0411 ಮುಖಾಂತರ ಘಟಾನಸ್ಥಳಕ್ಕೆ ಭೇಟಿ ನೀಡಿ ಮರೆಯಲ್ಲಿ ನಿಂತು ಅಲ್ಲಿಗೆ ಒಂದು ವ್ಯಕ್ತಿ ಅನಧಿಕೃತವಾಗಿ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಖಚಿತ ಪಡೆದುಕೊಂಡು 08-15 ಗಂಟೆಗೆ ನಾವು ದಾಳಿ ಮಾಡಲಾಗಿ ಆರೋಪಿತನು ಅಲ್ಲಿಂದ ತಪ್ಪಿಸಿಕೊಂ ಡು ಹೋಡಿ ಹೋಗಿರುತ್ತಾನೆ. ನಂತರ ಚಾ ಸಾ 2 ಮತ್ತು 3 ರವರಿಗೆ ಹಾಗೂ ಮಾಹಿತಿದಾರರಿಗೆ ವಿಚಾರಿಸಲಾಗಿ ಸದರಿಯವರು ಆರೋಪಿ ಮಲ್ಲಪ್ಪ ತಂದೆ ತಿಪ್ಪಣ್ಣ ಎಂ ದು ತಿಳಿಸಿರುತ್ತಾರೆ. ಸ್ಥಳ ಪರಿಶೀಲನೆ ಮಾಡಲಾಗಿ ಅಲ್ಲಿ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಕೊಡ ಅದರ ಅಂದಾಜು ಕಿಮ್ಮತ್ತು 10/- ರೂ ಹಾಗೂ ನೀಲಿ ಬಣ್ಣದ ಜಗ್ಗು ಅದರ ಅಂದಾಜು ಬೆಲೆ 05/- ರೂ. ಇದ್ದು ಹಾಗೂ ಸದರಿ ಕೊಡ ದಲ್ಲಿದ್ದ 12 ಲೀ ಸೇಂದಿಯನ್ನು ಸ್ಥಳದಲ್ಲಿಯೇ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಮು ಮಾ

ಅಂದಾಜು ಕಿಮ್ಮತ್ತು 135/- ರೂ ಇರುತ್ತದೆ. ನಂತರ ಅದರಲ್ಲಿನ 1 ಲೀ ಸೆಂದಿಯನ್ನು ರಾಸಾಯನಿಕ ಪರೀಕ್ಷೆ ಕುರಿತು ತೆಗೆದುಕೊಳ್ಳಲಾಯಿತು. ಅದರಲ್ಲಿ ಕೆ ಕೆ ಟಿ ಅಂತಾ ಸೀಲು ಮಾಡಿರುತ್ತೆನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 08-15 ರಿಂದ 09-15 ರ ವರೆಗೆ ಜರುಗಿಸಿರುತ್ತೆನೆ. ಸದರಿ ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಗಂಗಾಣಿ ಶಿವಶರಣಪ್ಪ ರವರ ಮನೆ, ಪಶ್ಚಿಮಕ್ಕೆ ರಾಮಲಿಂಗ ದೇವರಗುಢಿ ಉತ್ತರಕ್ಕೆ ಶಾಮರಾವ್ ದಳಪತಿಯವರ ಜಮೀನು, ಹಾಗೂ ದಕ್ಷಿಣ ದಿಕ್ಕಿಗೆ ಚನ್ನಮ್ಮ ಗಂಗಾಣಿರವರ ಹೊಲ ಇರುತ್ತದೆ. ನಂತರ ಸದರಿ ಮು ಮಾ ನೊಂದಿಗೆ ಮರಳಿ ಠಾಣೆಗೆ ಬಂದು ಚಾ ಸಾ 9 ರವರಿಗೆ ಒಪ್ಪಿ ಸಿರುತ್ತೆನೆ. ಸಾಕ್ಷಿಯು ಸದರಿ ವರದಿ ಹಾಗೂ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 1 ಹಾಗೂ 2 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಹಾಗೂ ನಿ ಪಿ 2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ರಾಸಾಯನಿಕ ಮಾದರಿ ಪರೀಕ್ಷೆಗೆ ತೆಗೆದಿರುವ 1 ಲೀ ಸೇಂದಿ ಬಾಟಲಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಹಾಗೂ ಘಟನೆ ನಡೆದ ದಿನ ಇದೇ ವ್ಯಕ್ತಿ ಸೇಂದಿ ಮಾರಾಟ ಮಾರುತ್ತಿದ್ದ ಎಂದು ಗುರುತಿಸಿರುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ರಾಮಲಿಂಗ ಗುಡಿಗೆ ಹೋಗಬೇಕಾದರೆ ಮೊದಲಿಗೆ ಒಂದು ದರ್ಗಾ ಬರುತ್ತದೆ ಹಾಗೂ ಅದರ ಅಕ್ಕ ಪಕ್ಕದಲ್ಲಿ ಸುಮಾರು ಜನ ಕುಳಿತು ಕೊಳ್ಳುತ್ತಾರೆ. ಸದರಿ ಅಂಗಡಿಯ ಪಕ್ಕದಲ್ಲಿ ಗಂಗಾಣಿ ಅವರ ಕಿರಾಣಿ ಅಂಗಡಿ ಇರುತ್ತದೆ ಎಂದರೆ ನನಗೆ ನೆನಪಿಲ್ಲ. ಸದರಿ ಅಂಗಡಿಯ ಹಿಂದುಗಡೆ ಗಂಗಾಣಿಯವರ ಮನೆ ಹಾಗೂ ಅದರ ಹಿಂದುಗಡೆ ಹೊಲಗಳು ಇರುತ್ತದೆ ಎಂದರೆ ನನಗೆ ನೆನಪಿಲ್ಲ. ಚಾ ಸಾ 2 ಮತ್ತು 3 ರವರ ಹೆಡ್ಡಾಳಿ ಗ್ರಾಮದ ನಿವಾಸಿ. ಘಟನಾ ಸ್ಥಳದಲ್ಲಿ ಯಾರು ಇರಲಿಲ್ಲ. ನಾವು ದಾಳಿ ಮಾಡಿದಾಗ ಯಾವ ವ್ಯಕ್ತಿ ಯಾರಿಗೆ ಸೇಂದಿ ಮಾರಾಟ ಮಾರುತ್ತಿದ್ದನು ಎಂಬುದರೆ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ನಾನು ಒಂದು ಲೀಟರ್ ಸೇಂದಿ ಬಾಟಲನ್ನು ಹೊರತು ಪಡಿಸಿ ಉಳಿದ ಮು ಮಾ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಆದರೆ ಸದರಿ ಮು ಮಾ ನ್ನು ಅಬಕಾರಿ ಇಲಾಖೆಗೆ ಜಮಾ ಮಾಡಿರುತ್ತೇನೆ. ಸಾಕ್ಷಿಗೆ ಮುವ ೂ 1 ನ್ನು ತೋರಿಸಲಾಗಿ ಅದರಲ್ಲಿ ದಿನಾಂಕ ನಮೂದಿಸಿಲ್ಲ ಎಂದರೆ ಸರಿ.

ದಿ. 03-04-2020 ರಂದು ಬೆಳಿಗ್ಗೆ 07-00 ಗಂಟೆಗೆ ನಾನು ಮತ್ತು ನಮ್ಮ ಸಿಬ್ಬಂದಿಯಾದ ಚಾ ಸಾ 5 ಮತ್ತು 6 ಗಸ್ತು ಕರ್ತವ್ಯದಲ್ಲಿದ್ದಾಗ ಸುಮಾರು 07-30 ಗಂಟೆಗೆ ಭೀಮಪ್ಪ ತಂದೆ ಬಸಪ್ಪ ಸಂದಿಮನಿ ಕರೆ ಮಾಡಿ ಯಡ್ಡಳ್ಳಿಗ್ರಾಮದ ರಾಮಲಿಂಗ ಗುಡಿ ಪಕ್ಕದ ಖುಲ್ಲಾಜಾಗದಲ್ಲಿ ಆರೋಪಿತನು ಅಕ್ರಮವಾಗಿ ಸೇಂದಿ ಮಾರಾಟ ಮಾರುತ್ತಿದ್ದ ಎಂಬ ಬಗ್ಗೆ ಮಾಹಿತಿ ಬಂದ ಮೇರೆಗೆ ನಾವು 07-45 ಗಂಟೆಗೆ ಯಡ್ಡಳ್ಳಿಕ್ರಾಸ್ ಹತ್ತಿರ ಹೋಗಿ ಚಾ ಸಾ 2

ಮತ್ತು 3 ರವರನ್ನು ಬರಮಾಡಿಕೊಂಡು ಸದರಿಯವರಿಗೆ ನಮಗೆ ಬಂದ ಮಾಹಿತಿಯ ಬಗ್ಗೆ ತಿಳಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿಯವರು ಪಂಚರಾಗಲು ಒಪ್ಪಿ ಕೊಂಡಿರುವುದರಿಂದ 08-00 ಗಂಟೆ ಸುಮಾರಿಗೆ ಯಡ್ಡಳ್ಳಿ ಕ್ರಾಸ್ ನಿಂದ ನಮ್ಮ ಸರ್ಕಾರಿ ಜೀಪು ನಂ. ಕೆ ಎ 32 ಜಿ 0411 ಮುಖಾಂತರ ಘಟಾನಸ್ಥಳಕ್ಕೆ ಭೇಟಿ ನೀಡಿ ಮರೆಯಲ್ಲಿ ನಿಂತು ಅಲ್ಲಿಗೆ ಒಂದು ವ್ಯಕ್ತಿ ಅನಧಿಕೃತವಾಗಿ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಖಚಿತ ಪಡೆದುಕೊಂಡು 08-15 ಗಂಟೆಗೆ ನಾವು ದಾಳಿ ಮಾಡಲಾಗಿ ಆರೋಪಿತನು ಅಲ್ಲಿಂದ ತಪ್ಪಿಸಿಕೊಂ ಡು ಹೋಡಿ ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 2 ಮತ್ತು 3 ರವರಿಗೆ ಹಾಗೂ ಮಾಹಿತಿದಾರರಿಗೆ ವಿಚಾರಿಸಲಾಗಿ ಸದರಿಯವರು ಆರೋಪಿ ಮಲ್ಲಪ್ಪ ತಂದೆ ತಿಪ್ಪಣ್ಣ ಎಂ ದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸ್ಥಳ ಪರಿಶೀಲನೆ ಮಾಡಲಾಗಿ ಅಲ್ಲಿ ಒಂದು ಕೆಂಪು ಬಣ್ಣದ ಪ್ಲಾ ಸ್ಟಿಕ್ ಕೊಡ ಅದರ ಅಂದಾಜು ಕಿಮ್ಮತ್ತು 10/- ರೂ ಹಾಗೂ ನೀಲಿ ಬಣ್ಣದ ಜಗ್ಗು ಅದರ ಅಂದಾಜು ಬೆಲೆ 05/- ರೂ. ಇದ್ದು ಹಾಗೂ ಸದರಿ ಕೊಡ ದಲ್ಲಿದ್ದ 12 ಲೀ ಸೇಂದಿಯನ್ನು ಸ್ಥಳದಲ್ಲಿಯೇ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಮು ಮಾ ಅಂದಾಜು ಕಿಮ್ಮತ್ತು 135/- ರೂ ಇರುತ್ತದೆ. ನಂತರ ಅದರಲ್ಲಿನ 1 ಲೀ ಸೇಂದಿಯನ್ನು ರಾಸಾಯನಿಕ ಪರೀಕ್ಷೆ ಕುರಿತು ತೆಗೆದುಕೊಳ್ಳಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರಲ್ಲಿ ಕೆ ಕೆ ಟಿ ಅಂತಾ ಸೀಲು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 08-15 ರಿಂದ 09-15 ರ ವರೆಗೆ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಗಂಗಾಣಿ ಶಿವಶರಣಪ್ಪ ರವರ ಮನೆ, ಪಶ್ಚಿಮಕ್ಕೆ ರಾಮಲಿಂಗ ದೇವರಗುಢಿ ಉತ್ತರಕ್ಕೆ ಶಾಮರಾವ್ ದಳಪತಿಯವರ ಜಮೀನು, ಹಾಗೂ ದಕ್ಷಿಣ ದಿಕ್ಕಿಗೆ ಚನ್ನಮ್ಮ ಗಂಗಾಣಿರವರ ಹೊಲ ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸದರಿ ಮು ಮಾ ನೊಂದಿಗೆ ಮರಳಿ ಠಾಣೆಗೆ ಬಂದು ಚಾ ಸಾ 9 ರವರಿಗೆ ಒಪ್ಪಿ ಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ನ್ಯಾ ಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಹಾಗೂ ಘಟನೆ ನಡೆದ ದಿನ ಇದೇ ವ್ಯಕ್ತಿ ಸೇಂದಿ ಮಾರಾಟ ಮಾರುತ್ತಿದ್ದ ಎಂದು ಗುರುತಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಗೂ ಹಾಗೂ ಮು ಮಾ ಗೂ ಯಾವುದೇ ರೀತಿಯ ಸಂಬಂದ ಇಲ್ಲದೇ ಇದ್ದರೂ ಸಹ ನಮ್ಮ ಇಲಾಖೆಯ ಅಂಡಿ ಸಂಖ್ಯೆ ಹೆಚ್ಚಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**